ಬಗರ್ ಹುಕ್ಕುಂ ಸಾಗುವಳಿ ಖಾಯಂ ಮಾಡುವ ಬಗ್ಗೆ

೧೧೮ (೧೩೭) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಮತ್ತು ಯೋಜನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಕೃಷಿ ಕಾರ್ಮಿಕರು, ಹರಿಜನ ಗಿರಿಜನ ಬಂಧುಗಳು ''ಬಗರ್ ಹುಕ್ಕುಂ'' ಸಾಗುವಳಿ ಖಾಯಂ ಮಾಡಲು, ಶಾಸಕರನ್ನೊಳಗೊಂಡ ತಾಲ್ಲೂಕಿಗೊಂದು ಸಮಿತಿ ರಚಿಸುವ ಯೋಜನೆ ಕಾರ್ಯರೂಪಕ್ಕೆ ಬಂದಿಲ್ಲ ಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರದವರು ಈ ಬಗ್ಗೆ ಅನೇಕ ಬಾರಿ ''ಬಗರ್ ಹುಕ್ಕುಂ'' ಸಾಗುವಳಿ ಖಾಯಂ ಮಾಡುತ್ತೇವೆಂದು ಆಶ್ವಾಸನೆ, ನೀಡಿದಾಗ್ಯೂ ಸಹ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನೆ ಸಚಿವರು).—

ಅ) ಸರ್ಕಾರದ ಭೂಮಿಯಲ್ಲಿನ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸಲು ಒಂದು ಬೇರೆಯಾದ ಸಮಿತಿಯನ್ನು ನೇಮಿಸಲು ಭೂ ಮಂಜೂರಾತಿ ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.

ಆ) ಅನಧಿಕೃತ ಸಾಗುವಳಿ ಜಮೀನುಗಳನ್ನು ಸಕ್ರಮಗೊಳಿಸಲು ಸರ್ಕಾರವು ಒಂದು ಮಸೂದೆಯನ್ನು ರೂಪಿಸಿ ಈ ಮಸೂದೆಯನ್ನು ಆಗಲೇ ವಿಧಾನ ಮಂಡಲದಲ್ಲಿ ಮಂಡಿಸಲಾಗಿದೆ.

ರಾಜ್ಯದಲ್ಲಿನ ಅಂಗನವಾಡಿಗಳ ಕುರಿತು

೧೧೯ (೨೨೭) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧) ರಾಜ್ಯದ ಎಷ್ಟು ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ತೆರೆಯಲಾಗಿದೆ ?

೨) ಅಂಗನವಾಡಿ ತೆರೆಯದೇ ಇರುವ ಹಳ್ಳಿಗಳೆಷ್ಟು ?

೩) ಈ ಅಂಗನವಾಡಿಗಳಲ್ಲಿ ಎಷ್ಟು ಮಂದಿ ನೌಕರರು ಕೆಲಸ ಮಾಡುತ್ತಿದ್ದಾರೆ ಹಾಗೂ ಇವರಿಗೆ ಕೊಡುತ್ತಿರುವ ಸಂಬಳ ಅಥವಾ ಗೌರವಧನವೆಷ್ಟು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)—

೧) ರಾಜ್ಯದ ೧೦,೪೩೮ ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ತೆರೆಯಲಾಗಿದೆ.

೨) ರಾಜ್ಯದ ೧೬,೫೮೦ ಹಳ್ಳಿಗಳಲ್ಲಿ ಅಂಗನವಾಡಿಗಳನ್ನು ಇನ್ನೂ ತೆರೆದಿಲ್ಲ.

೩) ಈ ಅಂಗನವಾಡಿಗಳಲ್ಲಿ ೧೧,೯೬೬ ಅಂಗನವಾಡಿ ಕಾರ್ಯಕರ್ತೆಯರೂ ಹಾಗೂ ೧೧,೯೬೬ ಸಹಾಯಕಿಯರೂ ಕೆಲಸ ಮಾಡುತ್ತಿದ್ದಾರೆ.

ಇವರಿಗೆ ಕೊಡುತ್ತಿರುವ ಗೌರವಧನ :

ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಕಾರ್ಯಕರ್ತೆಯರಿಗೆ ಮಾಹೆಯಾನ ರೂ ೨೭೫-೦೦ ಎಸ್.ಎಸ್.ಎಲ್.ಸಿ. ತೇರ್ಗಡೆಯಾಗದ ಕಾರ್ಯಕರ್ತೆಯರಿಗೆ ಮಾಹೆಯಾನ ರೂ. ೨೭೫-೦೦ ಸಹಾಯಕಿಯರಿಗೆ ರೂ. ೧೧೦-೦೦

ಕಾರ್ಮಿಕ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳು

೧೨೦ (೧೮೧) ಶ್ರೀ ಎ. ಕೃಷ್ಣಪ್ಪ (ಪರ್ತಕಾರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ಕಾರ್ಮಿಕ ನ್ಯಾಯಾಲಯಗಳಲ್ಲಿ ಇದುವರೆವಿಗೂ ದಾಖಲಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಆ) ಇದುವರೆವಿಗೂ ಇತ್ಯರ್ಥವಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು ?

ಇ) ಬಾಕಿ ಇರುವ ಮೊಕದ್ದಮೆಗಳೆಷ್ಟು ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ಕಳೆದ ೧೦ ವರ್ಷಗಳಿಂದ ೩೦-೬-೮೭ರ ವರೆಗೆ ೧೮,೫೨೩ ಮೊಕದ್ದಮೆಗಳು ದಾಖಲಾಗಿವೆ.

ಆ) ಕಳೆದ ೧೦ ವರ್ಷಗಳಿಂದ ೩೦-೬-೮೭ರ ವರೆಗೆ ೧೧,೮೭೯ ಮೊಕದ್ದಮೆಗಳು ಇತ್ಯರ್ಥವಾಗಿವೆ.

ಇ) ಬಾಕಿ ಇರುವ ಮೊಕದ್ದಮೆಗಳು ೬,೬೪೪.

ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಬೇರೆಯವರಿಗೆ ಮಾರಿರುವ ಬಗ್ಗೆ

೧೨೧ (೨೦೭) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೊಳ್ಳೆಗಾಲದ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ತಯಾರು ಇದನ್ನು ಖಾಸಗಿಯವರಿಗೆ ಮಾರಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಆ) ಈ ಕಾರ್ಖಾನೆಯ ಸರ್ಕಾರ ಮತ್ತು ರೈತರು ಹೂಡಿದ್ದ ಬಂಡವಾಳವೆಷ್ಟು ?

ಇ) ಖಾಸಗಿಯವರಿಗೆ ಎಷ್ಟು ಹಣಕ್ಕೆ ಕಾರ್ಖಾನೆ ಮಾರಲಾಗಿದೆ ?

ಶ್ರೀ ಆರ್.ಬಿ. ಪೋತ್ನಾದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ನಿಜ. ಅದಕ್ಕೆ ಕಾರಣಗಳು ಈ ಕೆಳಕಂಡಂತೆ ಇವೆ.

ಆ) ಕಾರ್ಖಾನೆಯು ೧೯೮೫-೮೬ನೇ ಸಾಲಿನಿಂದ ಸಾಕಷ್ಟು ಕಬ್ಬು ಬಾರದೇ ಇದ್ದುದರಿಂದ ಕಬ್ಬು ಅರೆಯುವ ಕಾರ್ಯಕ್ರಮವನ್ನು ನಿಲ್ಲಿಸಿತು. ಇದರಿಂದ ಕಾರ್ಖಾನೆಯು ತನ್ನ ಕಾರ್ಮಿಕರನ್ನು ದಿನಾಂಕ ೨೫-೧೨-೮೫ ರಿಂದ ಲೇಆಫ್ ಗೊಳಿಸಿತು.

ಇ) ಕಾರ್ಖಾನೆಯು ಸಾಕಷ್ಟು ಕಬ್ಬು ಅರೆಯದೇ ಇದ್ದುದರಿಂದ ರೂ. ೧೨-೦೬ ಕೋಟಿ ನಷ್ಟ ಅನುಭವಿಸಿತು.

ಈ) ಕಾರ್ಖಾನೆಯನ್ನು ಪುನುಶ್ಚೇತನಗೊಳಿಸುವ ಸಲುವಾಗಿ ನಿರ್ಮಿಸಲಾಗಿದ್ದ ಸಮಿತಿಯು ಕಾರ್ಖಾನೆಯನ್ನು ಪುನುಶ್ಚೇತನ ಗೊಳಿಸುವುದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚು ತಗಲುವುದೆಂದು ಮತ್ತು ಕಾರ್ಖಾನೆಯ ಆರ್ಥಿಕ ಪರಿಸ್ಥಿತಿ ಬಹಳಷ್ಟು ಹದಗೆಟ್ಟಿರುವುದರಿಂದ ಕಾರ್ಖಾನೆಯನ್ನು ಪುನುಶ್ಚೇತನ ಗೊಳಿಸುವ ಬದಲು ಕಾರ್ಖಾನೆಯನ್ನು ಸಮಾಪನಗೊಳಿಸುವುದು ಸೂಕ್ತವೆಂದು ನಿರ್ಧರಿಸಿ ವರದಿ ಸಲ್ಲಿಸಿತ್ತು.

ಉ) ಸರ್ಕಾರ (ಈಕ್ವಿಟಿ ಶೇರು ಮತ್ತು ಸಾಲಗಳು) ... ೧೨೨.೫೦ ಲಕ್ಷ
ರೈತರು ಹೂಡಿರುವ ಶೇರುಗಳ ಮೊತ್ತ ... ೪೪.೬೩ ಲಕ್ಷ

ಒಟ್ಟು ... ೧೬೭.೧೩ ಲಕ್ಷ

ಊ) ಮೆ॥ ಪೋಡೆ ಡಿಸ್ಟಿಲರೀಸ್‌ರವರಿಗೆ ರೂ. ೫.೪೯ ಕೋಟಿಗೆ ಮಾರಲಾಗಿದೆ.